

# ಸಭೆಗಳ ಸ್ಥಾಪನೆ




ದೇವರ ರಾಜ್ಯವು ಬೆಳೆಯುವುದನ್ನು ನೋಡುವಲ್ಲಿ ಪರಿಣಾಮಕಾರಿಯಾಗಲು, ಯೇಸುವಿನ ಅನುಯಾಯಿಗಳನ್ನು ಹೇಗೆ ಒಟ್ಟುಗೂಡಿಸುವುದು ಎಂದು ನಾವು ತಿಳಿದಿರಬೇಕು. ಯೇಸುವಿನ ಅನುಯಾಯಿಗಳು ಸ್ಥಳೀಯ ಸಭೆಗಳಲ್ಲಿ ಒಟ್ಟುಗೂಡುತ್ತಾರೆ, ಅದು ದೇವರ ರಾಜ್ಯವು ಬೆಳೆಯುವುದನ್ನು ನೋಡಲು ಬಯಸುತ್ತದೆ.

## **ಸಭೆಗಳ ಗುಣಲಕ್ಷಣಗಳನ್ನು ನಾವು ಸತ್ಯವೇದದಿಂದ ಅರ್ಥಮಾಡಿಕೊಳ್ಳಬಹುದು.**



ಅಪೋಸ್ತಲರ ಕೃತ್ಯಗಳು 2:37–47:

37 ಇದನ್ನು ಅವರು ಕೇಳಿ ಹೃದಯದಲ್ಲಿ
ಅಲಗುನೆಟ್ಟಂತಾಗಿ ಪೇತ್ರನನ್ನೂ ಉಳಿದ
ಅಪೋಸ್ತಲರನ್ನೂ – ಸಹೋದರರೇ, ನಾವೇನು
ಮಾಡಬೇಕು ಎಂದು ಕೇಳಲು 38 ಪೇತ್ರನು ಅವರಿಗೆ –
ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ
ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸು
ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ
ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ; 39 ಆ
ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ
ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ
ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ
ಮಾಡೋಣವಾಗಿದೆ ಎಂದು ಹೇಳಿದನು. 40 ಬೇರೆ
ಅನೇಕಾದ ಮಾತುಗಳಿಂದ ಅವನು ಖಂಡಿತವಾಗಿ
ಸಾಕ್ಷಿನುಡಿದು – ವಕ್ರಬುದ್ಧಿಯುಳ್ಳ ಈ ಸಂತತಿಯವರಿಂದ
ತಪ್ಪಿಸಿಕೊಳ್ಳಿರಿ ಎಂದು ಅವರನ್ನು ಎಚ್ಚರಿಸಿದನು. 41 ಅವನ
ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು.
ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ
ಸೇರಿದರು.

42 ಇವರು ಅಪೋಸ್ತಲರ ಬೋಧನೆಯನ್ನು
ಕೇಳುವುದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ
ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ
ನಿರತರಾಗಿದ್ದರು. 43 ಎಲ್ಲರಿಗೂ ಭಯ ಉಂಟಾಯಿತು,
ಇದಲ್ಲದೇ ಅನೇಕ ಅದ್ಭುತಕಾರ್ಯಗಳೂ
ಸೂಚಕಕಾರ್ಯಗಳೂ ಅಪೋಸ್ತಲರ ಕೈಯಿಂದ ನಡೆದವು.
44 ನಂಬಿದವರೆಲ್ಲರೂ ಒಗ್ಗಟ್ಟಾಗಿದ್ದು ತಮ್ಮದ್ದೆಲ್ಲವನ್ನೂ
ಹುದುವಾಗಿ ಅನುಭೋಗಿಸುತ್ತಾ 45 ತಮ್ಮ ತಮ್ಮ ಚಿರಸ್ಥಿರ
ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ
ಅವರವರ ಅಗತ್ಯವಿದ್ದಹಾಗೆ ಹಂಚಿಕೊಡುತ್ತಿದ್ದರು. 46 ಅವರು
ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ
ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ
ಹೃದಯದಿಂದಲೂ ಊಟಮಾಡುತ್ತಾ ಇದ್ದರು; 47
ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ
ದಯೆಯನ್ನು ಹೊಂದುವವರಾಗಿಯೂ ಇದ್ದರು. ಕರ್ತನು
ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ
ಮಂಡಲಿಗೆ ಸೇರಿಸುತ್ತಿದ್ದನನು.

ಈ ವಚನಗಳು ಮತ್ತು ಸತ್ಯವೇದದ ಇತರ ಸ್ಥಳಗಳಿಂದ, ಆರೋಗ್ಯಕರ ಸಭೆಯ ಗುಣಲಕ್ಷಣಗಳು ನಮಗೆ ತಿಳಿದಿದೆ. ಸಭೆಯ ಬಗ್ಗೆ ನಾವು ಈ ಕೆಳಗಿನ ಐದು ಪ್ರಶ್ನೆಗಳಿಗೆ ಉತ್ತರಿಸಬಹುದು.

## 1 ಸಭೆ ಯಾರು?



ಅ.ಕೃ. 2:41 ನೇ ವಾಕ್ಯದ ಮೇರೆಗೆ, ಸಭೆ ಅಂದರೆ ಸುವಾರ್ತೆಯನ್ನು ಸ್ವೀಕರಿಸುವವರು, ದೀಕ್ಷಾಸ್ನಾನ ಮಾಡಿಸಿಕೊಂಡವರು.

## 2 ಸಭೆ ಏನು ಮಾಡುತ್ತದೆ?

ಅ.ಕೃ. 2:37–47 ರಲ್ಲಿ, ಸಭೆಯು ಈ ಕೆಳಗಿನ ಏಳು ಆಜ್ಞೆಗಳನ್ನು ಪಾಲಿಸುತ್ತದೆ ಎಂದು ನಾವು ನೋಡಬಹುದು:

(1) ಪಶ್ಚಾತ್ತಾಪ ಪಟ್ಟು ನಂಬುತ್ತದೆ (ವ. 38)

(2) ದೀಕ್ಷಾಸ್ನಾನ ಹೊಂದುತ್ತದೆ (ವ. 38)

(3) ಪ್ರಾರ್ಥನೆ ಮಾಡುತ್ತದೆ (ವ. 42)

(4) ಶಿಷ್ಯರನ್ನಾಗಿ ಮಾಡುತ್ತದೆ (ವ. 47)

(5) ಪ್ರೀತಿಸುತ್ತದೆ (ವ. 44–47)

(6) ಕರ್ತನ ಭೋಜನವನ್ನು ಅಂಗೀಕರಿಸುತ್ತದೆ (ವ. 42)

(7) ಕೊಡುತ್ತದೆ (ವ. 45)

**3 ಸಭೆ ಎಲ್ಲಿ ಭೇಟಿಯಾಗುತ್ತದೆ?**

ಅ.ಕೃ. 2:46, 5:42, 16:15, 16:33–34, 18:7–8; ರೋಮಾ 16:3–5 ಮತ್ತು ಕೊಲೊಸ್ಸೆ 4:15 ಈ ವಾಕ್ಯಗಳನ್ನು ಓದಿರಿ. ಸಭೆಗಳು ಮನೆಗಳಲ್ಲಿ ಭೇಟಿಯಾಗುವುದು ಸತ್ಯವೇದದ ಮಾದರಿಯಾಗಿತ್ತು.

**4 ಸಭೆ ಯಾವಾಗ ಭೇಟಿಯಾಗುತ್ತದೆ?**

ಅ.ಕೃ. 2:46 ಮತ್ತು ಇಬ್ರಿಯ 10:24–25 ವಾಕ್ಯಗಳು ಹೇಳುವ ಪ್ರಕಾರ, ಸಭೆಯು ಅನುದಿನವೂ ಅಥವಾ ಸತತವಾಗಿ ಭೇಟಿಯಾಗುತ್ತಿತ್ತು.

**5 ಸಭೆ ಏಕೆ ಭೇಟಿಯಾಗುತ್ತದೆ?**

ಹಬಕ್ಕೂಕ 2:14 ಅನ್ನು ಓದಿರಿ, ದೇವರನ್ನು ಮತ್ತು ಆತನ ಮಹಿಮೆಯನ್ನು ತಿಳಿಯಪಡಿಸಲು ಸಭೆ ಭೇಟಿಯಾಗುತ್ತದೆ.

## ಆರೋಗ್ಯಕರ ಸಭೆಯ ಅಗತ್ಯಗಳನ್ನು ನಾವು ಸತ್ಯವೇದದಿಂದ ಅರ್ಥಮಾಡಿಕೊಳ್ಳಬಹುದು.



ಈ ಆರೋಗ್ಯಕರ ಸಭೆಯಲ್ಲಿ ಈ ಕೆಳಗಿನ ಐದು ಅಗತ್ಯಗಳು ಬೇಕಾಗಿರುವುದನ್ನು ಸತ್ಯವೇದದಲ್ಲಿನ ಹಲವಾರು ಸ್ಥಳಗಳಿಂದ ಕಾಣಬಹುದು.

### 1 ಒಂದು ಮುಖ್ಯ ತಲೆ

**(1) ಯೇಸು ಕ್ರಿಸ್ತ**




ಈ ಎಫೆಸ 1:22–23 ರಿಂದ ಹೇಳಿದ ಪ್ರಕಾರ ಸಭೆಗೆ ನೀಡಿರುವ ಎಲ್ಲಾ ವಿಷಯಗಳಿಗೆ ಯೇಸುವೇ ಮುಖ್ಯಸ್ಥನಾಗಿದ್ದಾನೆ, ಸಭೆಯ ಎಲ್ಲಾ ಸದಸ್ಯರು ಯೇಸುವಿಗೆ ಮುಖ್ಯಸ್ಥರಾಗಿ ಸಮಾನ ಪ್ರವೇಶ ಮತ್ತು ಜವಾಬ್ದಾರಿಯನ್ನು ಹೊಂದಿದ್ದಾರೆ.

## 2 ಅಧಿಕಾರದ ಎರಡು ಮೂಲಗಳು

ಸಭೆಯಲ್ಲಿ ಅಧಿಕಾರದ ಎರಡು ಮೂಲಗಳಿವೆ. ಈ ಅಧಿಕಾರದ ಮೂಲಗಳು ಎಂದಿಗೂ ವಿರೋಧಿಸುವುದಿಲ್ಲ ಮತ್ತು ಪರಸ್ಪರ ಧೃಡೀಕರಿಸುತ್ತವೆ.

### (1) ದೇವರ ವಾಕ್ಯ

2 ತಿಮೊಥಿ 3:16–17 ರಿಂದ ನಮಗೆ ತಿಳಿಯುವ ಹಾಗೆ,, ಸಭೆಗೆ ಅಧಿಕಾರದ ಒಂದು ಮೂಲವೆಂದರೆ ಸತ್ಯವೇದದಲ್ಲಿರುವ ದೇವರ ವಾಕ್ಯ ಎಂದು ನಮಗೆ ತಿಳಿದಿದೆ.

### (2) ಪವಿತ್ರಾತ್ಮ

ಯೋಹಾನ 14:26 ಮತ್ತು 1 ಕೊರಿಂಥ 2:12–16 ವಾಕ್ಯದಿಂದ ತಿಳಿಯುವ ಹಾಗೆ, ಅಧಿಕಾರದ ಎರಡನೇ ಮೂಲವೆಂದರೆ ಪವಿತ್ರಾತ್ಮನು.

## 3 ಮೂರು ಪಾತ್ರಗಳು

### (1) ಸಭಾಪಾಲಕರು

1 ತಿಮೊಥೆ 3:1–7 ಮತ್ತು 1 ಪೇತ್ರ 5:1–4 ರಲ್ಲಿ, ಸಭೆಯಲ್ಲಿ ಒಂದು ಪಾತ್ರವು ಸಭಾಪಾಲಕರ ಪಾತ್ರವೆಂದು ನಮಗೆ ತಿಳಿದದೆ, ಇದನ್ನು ಕುರುಬ, ಮೇಲ್ವಿಚಾರಕ ಅಥವಾ

ಸಭೆಯ ಹಿರಿಯ ಎಂದೂ ಕರೆಯುತ್ತಾರೆ.

**(2) ಧರ್ಮಾಧಿಕಾರಿ**

ಅ.ಕೃ. 6:1–15 ಮತ್ತು 1 ತಿಮೊಥೆ 3:8–13 ರಿಂದ, ಎರಡನೇ ಪಾತ್ರ ಧರ್ಮಾಧಿಕಾರಿ ಪಾತ್ರವೆಂದು ನಮಗೆ ತಿಳಿದಿದೆ. ಧರ್ಮಾಧಿಕಾರಿಯು ಸಭೆಯೊಳಗೆ ಸೇವಕನಾಗಿದ್ದು, ಅವನು ನಿರ್ದಿಷ್ಟ ಪ್ರದೇಶದಲ್ಲಿ ಜವಾಬ್ದಾರಿಯನ್ನು ಪೂರೈಸುತ್ತಾನೆ.

**(3) ಯಾಜಕರು**

1 ಪೇತ್ರ 2:9–10 ರಿಂದ ತಿಳಿಯುವ ಹಾಗೆ, ಯೇಸುವಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರೂ ಯಾಜಕರಾಗಿದ್ದಾರೆ. ಯಾಜಕರಾಗಿ, ಯೇಸುವಿನ ಸರ್ವ ಅನುಯಾಯಿಗಳು ಜನರನ್ನು ದೇವರ ಬಳಿಗೆ ಕರೆದೊಯ್ಯಲು ಅರ್ಹರಾಗಿರುತ್ತಾರೆ.

## 4 ಆರೋಗ್ಯದ ಏಳು ಸೂಚನೆಗಳು

**(1) ಸ್ವ–ಆಡಳಿತ**

ಅ.ಕೃ. 6:1–7 ರಿಂದ, ಸಭೆಯು, ಸ್ವತ:

ಧರ್ಮಾಧಿಕಾರಿ ನೇಮಕಾತಿಗಳನ್ನು ಮಾಡಿದೆ ಎಂದು ನಮಗೆ ತಿಳಿದಿದೆ. ಆರೋಗ್ಯಕಾರಿ ಸಭೆಯು ಸತ್ಯವೇದ ಮತ್ತು ಪವಿತ್ರಾತ್ಮದ ಅಧಿಕಾರಕ್ಕೆ ಅನುಗುಣವಾಗಿ ಸ್ವತ: ನಿರ್ಧಾರ ತೆಗೆದುಕೊಳ್ಳುತ್ತದೆ.

(2) **ಸ್ವಯಂ–ಬೆಂಬಲ**

ಆರೋಗ್ಯಕರ ಸಭೆಯು ತನ್ನದೇ ಆದ ಸಂಪನ್ಮೂಲಗಳ ಉಸ್ತುವಾರಿಯಿಂದ ಅದು ಮಾಡುವ ಎಲ್ಲವನ್ನು ಬೆಂಬಲಿಸುತ್ತದೆ. ಕೆಲವು ಮಾದರಿಗಳನ್ನು ನಾವು ಸತ್ಯವೇದದಲ್ಲಿ ನೋಡುತ್ತೇವೆ. ಅ.ಕೃ. 2:44–45, 4:34–36; 2 ಕೊರಿಂಥ 8:1–5 ಮತ್ತು 9:6–15.

(3) **ಸ್ವಯಂ–ಬೆಳವಣಿಗೆ**

ಆರೋಗ್ಯಕರ ಸಭೆಯು ದೇವರ ರಾಜ್ಯದ ಬೆಳವಣಿಗೆಯನ್ನು ಹುಡುಕುವಲ್ಲಿ ನಿಷ್ಠಾವಂತವಾಗಿರಬೇಕು. ಯೇಸುವನ್ನು ನಂಬದ ಜನರಿಗೆ ಯೇಸುವಿನ ಅನುಯಾಯಿಗಳನ್ನು ಪಾಲಿಸುವ ಮೂಲಕ ಸುವಾರ್ತೆಯನ್ನು ಸಾರಬೇಕು. ಯೇಸುವನ್ನು ನಂಬುವವರು ಯೇಸುವಿನಂತೆ ಆಗಲು ಮತ್ತು

ಸ್ಥಳೀಯ ಸಭೆಗಳಾಗಿ ಸೇರಲು ಕಾರಣವಾಗಬೇಕು. ಕೆಲವು ಉದಾಹರಣೆಗಳು: 1 ಥೆಸಲೋನಿಕ 1:7–8, ಮೂರುವಾರಗಳಲ್ಲಿಯೇ ಥೆಸಲೋನಿಕ ಸಭೆಯು ಸ್ಥಾಪಿಸಲ್ಪಟ್ಟಿತು (ಅ.ಕೃ. 17:1–9). ಇದು ಯೇಸುವಿನಲ್ಲಿ ನಂಬಿಕೆಯಿಡಲು ಇನ್ನೂ ಒಂದು ಉದಾಹರಣೆಯಾಗಿದೆ.

### (4) ಸ್ವಯಂ–ತಿದ್ದುಪಡಿ

2 ತಿಮೊಥೆ 3:16–17 ರಿಂದ, ಪ್ರತಿಯೊಂದೂ ಒಳ್ಳೆಯ ಕಾರ್ಯಕ್ಕೂ ಸಭೆಯನ್ನು ಮಾರ್ಗದರ್ಶನ ಮಾಡಲು ಸತ್ಯವೇದದಲ್ಲಿರುವ ದೇವರ ಮಾತು ಲಾಭದಾಯಕವೆಂದು ನಮಗೆ ತಿಳಿದಿದೆ. ಆರೋಗ್ಯಕರ ಸಭೆ ದೇವರ ವಾಕ್ಯದ ಸರಿಯಾದ ತಿಳುವಳಿಕೆಯಿಂದ ಮಾರ್ಗಧರ್ಶಿಸಲ್ಪಡುತ್ತದೆ ಮತ್ತು ಸಭೆಯೊಳಗೆ ತಿದ್ದುಪಡಿ ಬರುತ್ತದೆ.

## 5 ಪಂಚ ಕರ್ಮಗಳು

### (1) ಆರಾಧನೆ

ಮತ್ತಾಯ 22:36–38 ರಲ್ಲಿ ನಾವು ದೇವರನ್ನು ಪ್ರೀತಿಸಲು ಆಜ್ಞಾಪಿಸಲ್ಪಟ್ಟಿದ್ದೇವೆ. ದೇವರ

ಮೇಲಿನ ಪ್ರೀತಿಯ ಅಭಿವ್ಯಕ್ತಿಯಾಗಿ ಸಭೆಯು ಮಾಡುವ ಯಾವುದಾದರೂ ಕಾರ್ಯವೇ ಆರಾಧನೆಯಾಗಿದೆ. ಆರಾಧನೆಯು ಧರ್ಮಶಾಸ್ತ್ರಗಳನ್ನು ಓದುವುದು, ಹಾಡುವುದು, ಪ್ರಾರ್ಥಿಸುವುದು, ಮತ್ತು ದೇವರ ವಾಕ್ಯಗಳನ್ನು ಅನುಸರಿಸುವುದು ಒಳಗೊಂಡಿರುತ್ತದೆ.

(2) **ಅನ್ಯೋನ್ಯತೆ**

ಮತ್ತಾಯ 22:39 ರಲ್ಲಿ ನಮ್ಮಂತೆಯೇ ನಮ್ಮ ನೆರೆಯವರನ್ನು ಪ್ರೀತಿಸಲು ಆಜ್ಞಾಪಿಸಲ್ಪಟ್ಟಿದ್ದೇವೆ. ಅ.ಕೃ. 2:42–47 ರಲ್ಲಿ ಆದಿ ಸಭೆಯು ಯೇಸುವಿನ ಅನುಯಾಯಿಗಳ ಅನ್ಯೋನ್ಯತೆಯಲ್ಲಿ ಮೀಸಲಾಗಿತ್ತು. ಅನ್ಯೋನ್ಯತೆಯು, ಒಬ್ಬರಿಗೊಬ್ಬರು ಪ್ರಾರ್ಥಿಸುವುದು, ಒಬ್ಬರ ಭಾರಗಳನ್ನು ಹೊರುವುದು, ಮತ್ತು ಸುವಾರ್ತೆಯ ಸತ್ಯಗಳನ್ನು ಪರಸ್ಪರ ನೆನಪಿಸುವುದು ಒಳಗೊಂಡಿದೆ.

(3) **ಶಿಷ್ಯತ್ವ**

ಮತ್ತಾಯ 28:18–20 ರಲ್ಲಿ ಯೇಸು ಆಜ್ಞಾಪಿಸಿದ್ದನ್ನು ಪಾಲಿಸುವಂತೆ ನಾವು ಮಾಡುವ ಶಿಷ್ಯರಿಗೆ ಕಲಿಸಲು ನಮಗೆ

ಆಜ್ಞಾಪಿಸಲಾಗಿದೆ. ಅ.ಕೃ. 2:42–47, ಆದಿ ಸಭೆಯು ಅಪೋಸ್ತಲರ ಬೋಧನೆಗೆ ಮೀಸಲಾಗಿತ್ತು ಎಂದು ನಾವು ನೋಡುತ್ತೇವೆ, ಅದನ್ನು ಈಗ ಸತ್ಯವೇದದಲ್ಲಿ ದಾಖಲಿಸಲಾಗಿದೆ. ಶಿಷ್ಯತ್ವವು ಜನರನ್ನು ಯೇಸುವಿನಂತೆ ಆಗಲು ಮತ್ತು ಆತನೊಂದಿಗಿನ ಸಂಬಂಧದಲ್ಲಿ ಬೆಳೆಯಲು ಕಾರಣವಾಗುತ್ತದೆ.

**(4) ಸೇವೆ**

ಮತ್ತಾಯ 22:39 ರಲ್ಲಿ ನಮ್ಮ ನೆರೆಯವರನ್ನು ನಮ್ಮಂತೆಯೇ ಪ್ರೀತಿಸಲು ಆಜ್ಞಾಪಿಸಲ್ಪಟ್ಟಿದೆ. ಅ.ಕೃ. 2:42–47 ರಲ್ಲಿ ನೋಡುವ ಹಾಗೆ, ಆದಿ ಸಭೆಯು ಸಂಪನ್ಮೂಲಗಳನ್ನು ಅವರವರ ಅಗತ್ಯತೆಗೆ ತಕ್ಕಂತೆ ಹಂಚಿಕೊಡುತ್ತಿತ್ತು. ದೇವರ ಪ್ರೀತಿಯನ್ನು ಸಂವಹನ ಮಾಡುವ ಸಾಧನವಾಗಿ ಆರೋಗ್ಯಕರ ಸಭೆಯು ಜನರಿಗೆ ಸೇವೆಯಲ್ಲಿ ತೊಡಗಿಸಿ –ಕೊಳ್ಳಬೇಕು.

**(5) ಸುವಾರ್ತಾಸೇವೆ**

ಮತ್ತಾಯ 28:18–20 ರಲ್ಲಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಲು ಆಜ್ಞಾಪಿಸಲ್ಪಟ್ಟಿ –ದ್ದೇವೆ. ಅ.ಕೃ. 2:47 ರಲ್ಲಿ

ನೋಡುತ್ತೇವೆ, ಯೇಸುವಿನ ಸುವಾರ್ತೆಯು ಸಾರಲ್ಪಡುವಂತೆಯೇ ಅನೇಕ ಜನರು ಸಭೆಯ ಮಂಡಲಿಗೆ ಸೇರಿಸಲ್ಪಟ್ಟರು ಎಂಬದಾಗಿದೆ. ಯೇಸುವನ್ನು ನಂಬಲು ಯಾರನ್ನಾದರೂ ಕರೆದೊಯ್ಯುವ ಉದ್ದೇಶದಿಂದ ಸುವಾರ್ತಾಸೇವೆಯು ಯೇಸುವಿನ ಸುವಾರ್ತೆಯನ್ನು ಹಂಚಿಕೊಳ್ಳುತ್ತಿದೆ. ಸುವಾರ್ತಾಸೇವೆಯು ಆರೋಗ್ಯಕರ ಸಭಾಸದಸ್ಯರ ನಿಯಮಿತ ಅಭ್ಯಾಸವಾಗಿರಬೇಕು. ಒಂದು ಸಭೆಯು ದೇವರ ರಾಜ್ಯದ ಬೆಳವಣಿಗೆಗೆ ಎಲ್ಲೆಡೆ ಮತ್ತು ಭೂಮಿಯ ಮೇಲಿನ ಜನರಿಗೆ ಬದ್ಧವಾಗಿರಬೇಕು.

## ಸಭೆಯು ಒಟ್ಟಿಗೆ ಸೇರುವುದು ಹೇಗಿರಬೇಕು?



ಈಗ ನಾವು ಆರೋಗ್ಯಕರ ಸಭೆಯ ಗುಣಲಕ್ಷಣಗಳು ಮತ್ತು ಅಗತ್ಯತೆಗಳನ್ನು ಪರಿಶೀಲಿಸಿದ್ದೇವೆ, ಸಭೆಯು ಒಟ್ಟಿಗೆ ಸೇರುವುದರಲ್ಲಿ ಅನುಸರಿಸಬಹುದಾದ ಒಂದು ರೂಪುರೇಖೆಯನ್ನು ನಾವು ರಚಿಸಬಹುದು. ಪ್ರತೀ

ಸಭೆಯು ತಮ್ಮ ಸಭೆಯಲ್ಲಿ ಹೇಗೆ ಒಟ್ಟಾಗಿ ಸೇರಬೇಕೆಂಬುದನ್ನು ಗ್ರಹಿಸಬೇಕು, ಸತ್ಯವೇದ ಮತ್ತು ಪವಿತ್ರಾತ್ಮನ ಅಧಿಕಾರಕ್ಕೆ ಓಳಪಟ್ಟಿರಬೇಕು. ಸಹಾಯಕವಾಗುವಂತಹ ಒಂದು ರೂಪುರೇಖೆಯು ಈ ಕೆಳಕಂಡಂತಿರುತ್ತದೆ.

| | | |
|---|---|---|
| 1 | **ಆರಾಧನೆ** | ಪ್ರಾರ್ಥಿಸಿ ಮತ್ತು ಹಾಡಿರಿ |
| 2 | **ಅನ್ಯೋನ್ಯತೆ** | ಪ್ರಾರ್ಥನೆ ವಿಜ್ಞಾಪನೆಗಳು ಮತ್ತು ಸಾಕ್ಷಿಗಳು<br>ದೀಕ್ಷಾಸ್ನಾನ ಮತ್ತು ಕರ್ತನಭೋಜನ |
| 3 | **ಶಿಷ್ಯತ್ವ** | ಸತ್ಯವೇದ ಅಧ್ಯಯನ, ಅಭ್ಯಾಸ ಮಾಡುವುದು, ಮತ್ತು ಬದ್ಧತೆಗಳನ್ನು ಮಾಡುವುದು |
| 4 | **ಸೇವೆ** | ಉಡುಗೊರೆಗಳ್ನು ಶೇಖರಿಸಿ ಮತ್ತು ಅವುಗಳನ್ನು ಇತರರೊಂದಿಗೆ ಹಂಚುವುದು |
| 5 | **ಸುವಾರ್ತಾಸೇವೆ** | ಸಭೆಯ ಒಳಗೆ ಮತ್ತು ಹೊರಗೆ ಯೇಸುವಿನ ಬಗ್ಗೆ ಸಾರುವುದು |

## ನಾವು ಸಭೆಯನ್ನು ಹೇಗೆ ರಚಿಸಬಹುದು?



ಸಭೆಯನ್ನು ರೂಪಿಸಲು ಯೇಸುವಿನ ದೀಕ್ಷಾಸ್ನಾನ ಪಡೆದ ಅನುಯಾಯಿಗಳನ್ನು ಸಭೆ ಎಂದು ಗುರುತಿಸಲು ಆಹ್ವಾನಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಈ ಬದ್ಧತೆಯನ್ನು ಮಾಡಿದ ನಂತರ, ಸಭೆಯು ಆರೋಗ್ಯಕರವಾಗಿರಲು ನಾವು ಸಹಾಯ ಮಾಡಲು ಪ್ರಯತ್ನಿಸಬೇಕು. ಪುಟಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಯೇಸುವಿನ ಏಳು ಆಜ್ಞೆಗಳಿಗೆ ಒದಗಿಸಲಾದ ಬಾಹ್ಯರೇಖೆಗಳನ್ನು ಬಳಸಿಕೊಂಡು ಶಿಷ್ಯತ್ವಕ್ಕಾಗಿ ಸಭೆಯನ್ನು ಭೇಟಿ ಮಾಡಿ. ಸಭೆಯ ಗುಣಲಕ್ಷಣಗಳು, ಆರೋಗ್ಯಕರ ಸಭೆಯ ಅಗತ್ಯತೆಗಳು ಮತ್ತು ಸಭೆಯ ಸಂಧಿಸುವಿಕೆಯ ಮಾದರಿಯನ್ನು ಸಭೆಗೆ ಕಲಿಸಬೇಕು. ಅಧಿಕಾವಧಿ, ಆರೋಗ್ಯಕರ ಸಭೆಗಳ ಹೆಚ್ಚಿನ ಗುಣಲಕ್ಷಣಗಳು ಮತ್ತು ಅಗತ್ಯತೆಗಳನ್ನು ಅಳವಡಿಸಿಕೊಳ್ಳಲು ನಾವು ಸಭೆಯನ್ನು ಪ್ರೋತ್ಸಾಹಿಸಬೇಕು. ಸಭೆಗಳಿಗೆ ಆಗಾಗ್ಗೆ ಭೇಟಿ ನೀಡಿ ಪ್ರೋತ್ಸಾಹಿಸುವುದು, ಸಭೆಯಲ್ಲಿ ನಾಯಕರನ್ನು ಗುಣಿಸುವುದು. ಸಭೆ ರಚಿಸುವ ಪ್ರಕ್ರಿಯೆಯನ್ನು ನಾವು ಈ ಕೆಳಗಿನಂತೆ ವಿವರಿಸಬಹುದು.




ಯೇಸುವಿನ ದೀಕ್ಷಾಸ್ನಾನ ಪಡೆದ
ಅನುಯಾಯಿಗಳನ್ನು ‘ಸಭೆ’ ಎಂದು
ಗುರುತಿಸಲು ದಾರಿ ಮಾಡಿಕೊಡಿ




ಯೇಸುವಿನ ಏಳು ಆಜ್ಞೆಗಳಿಂದ
ಪ್ರಾರಂಭಿಸಿ ಸಭೆಯನ್ನು
ಶಿಷ್ಯರನ್ನಾಗಿ ಮಾಡಿ




ಸಭೆಯ ಗುಣಲಕ್ಷಣಗಳು,
ಆರೋಗ್ಯಕರ ಸಭೆಯ ಅಗತ್ಯತೆಗಳು
ಮತ್ತು ಸಭೆಯ ಸಂಧಿಸುವಿಕೆಯ
ಮಾದರಿಯನ್ನು ಸಭೆಗೆ ಕಲಿಸಬೇಕು




ಅಧಿಕಾವಧಿ, ಆರೋಗ್ಯಕರ ಸಭೆಗಳ ಹೆಚ್ಚಿನ ಗುಣಲಕ್ಷಣಗಳು ಮತ್ತು ಅಗತ್ಯತೆಗಳನ್ನು ಅಳವಡಿಸಿಕೊಳ್ಳಲು ನಾವು ಸಭೆಯನ್ನು ಪ್ರೋತ್ಸಾಹಿಸಬೇಕು. ಸಭೆಗಳಿಗೆ ಆಗಾಗ್ಗೆ ಭೇಟಿ ನೀಡಿ ಪ್ರೊತ್ಸಾಹಿಸುವುದು, ಸಭೆಯಲ್ಲಿ ನಾಯಕರನ್ನು ಗುಣಿಸುವುದು

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible,
BSI - Kannada - J.V. published by The Bible
Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.